

ತಿರು ತಿರುಗೆಲೆ ಚರಕ: ಎರಡು ವರ್ಷಗಳ ಹಿಂದೆ ಸಾಬರಮತಿ ಆಶ್ರಮಕ್ಕೆ ತಮ್ಮ ಕುಟುಂಬದೊಂದಿಗೆ ಭೇಟಿ ನೀಡಿದ್ದ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ

# ನಾಲ್ಕೂ ನಿಟ್ಟಿನಿಂದ ಗಾಂಧಿ

ಹೋಗುವುದು ದರ್ಶನಕ್ಕೆ. ಒಬ್ಬ ಅವಧೂತನೋ ಮಹಾತ್ಮನೋ ನಡೆದಾಡಿದಂತಹ ಪುಣ್ಯಕ್ಷೇತ್ರದ ಮಹಿಮೆಯಲ್ಲಿ ಮಿಂದು ಬರುವುದಕ್ಕೆ. ಆದರೆ ಸಾಬರಮತಿಯ ಮಹಾತ್ಮ ಅಂತಹ ಯಾವ ಮಹಿಮೆಯ ಪ್ರಕಾಶವನ್ನೂ ನೀಡದವ. ನಾಲ್ಕೈದು ಚರಕ, ನಾಡಹೆಂಚಿನ ಒಂದು ಖಾಲಿ ಗುಡಿಸಲು, ಇಷ್ಟರಾಚೆಗೆ ಏನನ್ನೂ ಅನುಗ್ರಹಿಸದ ಮಹಿಮಾಪುರುಷ.

ಗಾಂಧಿಯ ಈ ಮೌನವನ್ನು ಮುರಿಯುವುದು ಹೇಗೆ? ‘ಗಾಂಧೀವಾದ’ ಎನ್ನುತ್ತೇವೆ. ಬಹುಶಃ ಅದೇ ಒಂದು ವಿಕೃತಿ. ಮಾರ್ಕ್ಸ್‌ವಾದ ಎಂಬುದೊಂದಿದೆ. ಸ್ತ್ರೀವಾದ ಎಂಬುದೊಂದಿದೆ. ಚರಿತ್ರೆಯ ಗತಿಯ ಕುರಿತು ಇರುವ ನಿರ್ದಿಷ್ಟ ಥಿಯರಿಗಳು ಅವು. ಆ ಥಿಯರಿಗಳ ಮೂಸೆಯಿಂದ ನಿರ್ದಿಷ್ಟ ಕಾರ್ಯಯೋಜನೆಗಳೂ ಹೊರಹೊಮ್ಮುತ್ತವೆ. ಗಾಂಧಿಯಲ್ಲಿ ಅಂಥಾ ಯಾವ ವಾದವೂ ಇಲ್ಲ. ಅಹಿಂಸೆ, ಖಾದಿ, ಗ್ರಾಮಪಂಚಾಯಿತಿ ಇವುಗಳೇ ಒಂದು ವಾದವಾಗಲು ಸಾಧ್ಯವಿಲ್ಲ. ಅಂದರೆ ಒಂದು ವ್ಯವಸ್ಥಿತ ಥಿಯರಿಯಾಗಲು ಸಾಧ್ಯವಿಲ್ಲ. ಅಥವಾ ಹೋಗಲಿ ಎಂದರೆ, ಶೈವರು, ವೈಷ್ಣವರು, ಜೈನರು ಎಂದು ಮುಂತಾಗಿ ಉಪಾಸನೆಯ ಕ್ರಮಗಳಿವೆ. ಗಾಂಧೀವಾದ ಎನ್ನುವುದು ಅಂತಹ ಇನ್ನೊಂದು ಉಪಾಸನೆಯ ಕ್ರಮವಲ್ಲ. ಹಾಗಾದರೆ, ಗಾಂಧಿಯನ್ನು ಏನೆಂದು ಬಗೆಯುವುದು?

ಬಹುಶಃ ಅದೇ ಗಾಂಧಿಯ ನಿಜವಾದ ಕಾಣ್ಕೆಯಿರಬೇಕು. ಮನುಷ್ಯರ ಜೀವಿತದ ಕುರಿತು ಚಿಂತಿಸುವುದು ಎಂದರೆ ಏನು ಎನ್ನುವ ಪ್ರಶ್ನೆಯನ್ನೇ ಕುರಿತು ಚಿಂತಿಸುವುದು. ಅದಕ್ಕೆ ಅಂತಿಮ ಉತ್ತರ ಏನೇ ಇರಲಿ, ಮೊದಲ ಉತ್ತರವಂತೂ ಸ್ವಯಂಸಿದ್ಧ. ಮನುಷ್ಯರ ಜೀವಿತದ ಕುರಿತ ಚಿಂತನೆ ಎಂದರೆ ಪ್ರಥಮವಾಗಿ ವಸ್ತುಪ್ರಪಂಚದ ಕುರಿತ ಚಿಂತನೆಯಲ್ಲ. ಅದು ವ್ಯಕ್ತಿಗಳ ಕುರಿತ ಚಿಂತನೆ. ವ್ಯಕ್ತಿಗಳು ಎಂದರೆ ಕ್ರಿಯಾಕರ್ಮಗಳ ಅಧಿಕಾರಿಗಳು ಎಂದು ಅರ್ಥವೇ ಹೊರತೂ, ಭೌತಿಕ ಲಕ್ಷಣಗಳುಳ್ಳ ಯಾವುದೋ ಒಂದು ಜೀವಪ್ರಭೇಧದ ಕುರಿತ ಚಿಂತನೆಯಲ್ಲ. ಅಥವಾ ಖಾಸಗೀ ಅನುಭವಗಳ, ನೆನಪುಗಳ ಆಟೋಬಯೋಗ್ರಾಫಿಕಾಲ್ ಚಿಂತನೆಯೂ ಅಲ್ಲ.

ನಮ್ಮ ಕ್ರಿಯಾಕರ್ಮಗಳ ಕುರಿತ ಚಿಂತನೆ ನಮ್ಮ ಕ್ರಿಯಾಕರ್ಮಗಳ ಆಚೆಗೆ ನಡೆಯಲು ಸಾಧ್ಯವಿಲ್ಲ. ಉತ್ತರಧ್ರುವದಲ್ಲಿ ಇಗ್ಲೂಗಳನ್ನು ಸರಿಯಾಗಿ ಕಟ್ಟುವ ಕ್ರಮ ಏನು ಎನ್ನುವುದರ ಚಿಂತನೆ ಉತ್ತರಧ್ರುವದಲ್ಲಿ ಇಗ್ಲೂಗಳನ್ನು ಕಟ್ಟುವ ಸಂದರ್ಭದ ಆಚೆ ನಡೆಯಲು ಸಾಧ್ಯವಿಲ್ಲ. ಅದರರ್ಥ ಈ ಪ್ರಶ್ನೆಯನ್ನು ಉತ್ತರಿಸಲು ನೀವೂ ಇಗ್ಲೂಗಳನ್ನೇ ಕಟ್ಟಬೇಕು ಎಂದಲ್ಲ. ಆದರೆ, ಉತ್ತರಧ್ರುವದಲ್ಲಿ ಇಗ್ಲೂಗಳನ್ನು ಕಟ್ಟುವ ರೂಢಿಯ ಭಾಗವಾಗಿರಬೇಕು ಎಂದಷ್ಟೆ. ಮಾನವ ಕ್ರಿಯಾಕರ್ಮಗಳ ಕುರಿತ ಚಿಂತನೆಯ ಒಳಹೊಗಲು ನಮಗೆ ಒಂದಲ್ಲಾ ಒಂದು ಕ್ರಿಯಾಕರ್ಮದ ಮೂಲಕ ಮಾತ್ರವೇ ಸಾಧ್ಯ. ಚರಕ ಅಂಥದ್ದೊಂದು ಕ್ರಿಯೆ ಅಷ್ಟೇ. ಅದಿಲ್ಲದಿದ್ದರೆ, ಇನ್ನೊಂದಾದರೂ ಆದೀತು. ನಿಮಗೆ ನಾಡಹೆಂಚಿನ ಮನೆಯಲ್ಲದೇ ತಾರಸಿಯ ಫ್ಲಾಟ್ ಇದ್ದರೂ ನಡೆದೀತು. ನೀವು ಗಾಂಧಿಯ ರೀತಿ ಪಥ್ಯವನ್ನು ಕೇಂದ್ರವಾಗಿಟ್ಟುಕೊಂಡು ನಿಮ್ಮ ಬದುಕಿನ ಕುರಿತು ಚಿಂತಿಸಿದರೂ ಆದೀತು. ಅಥವಾ ಇನ್ನು ಯಾವುದಾದರೂ ನಿಶ್ರೇಯಸವನ್ನು ಕೇಂದ್ರವಾಗಿಟ್ಟುಕೊಂಡು ಚಿಂತಿಸಿದರೂ ಆದೀತು. ಅಹಿಂಸೆಯನ್ನೇ ಪರಮಧರ್ಮವೆಂದರೂ ಆದೀತು. ಇಲ್ಲವೇ, ಕರುಣೆಯೂ ನಡೆದೀತು. ಖಾದಿಯನ್ನೇ ತೊಟ್ಟರೂ ಆದೀತು. ಇಲ್ಲವೇ ಬೇರೆ ವಸ್ತ್ರವಿದ್ದರೂ ಆದೀತು.

ಇದರರ್ಥ ಇಷ್ಟೇ. ಗಾಂಧೀ ಆಶ್ರಮದಲ್ಲಿರುವ ಯಾವ ಅಂಶವೂ ನಿಯತವಲ್ಲ. ಅನಿವಾರ್ಯವಲ್ಲ. ಅತ್ಯಗತ್ಯವಲ್ಲ. ಆದರೆ, ಯಾವುದೋ ಇಂಥದ್ದೊಂದು ಕ್ರಮ ಮಾತ್ರ ಅಗತ್ಯ. ಗಾಂಧೀಜಿ ಈ ನಿರ್ದಿಷ್ಟ ವಸ್ತು–ಕ್ರಮಗಳ ಮೂಲಕ ತಮ್ಮ ಹುಡುಕಾಟವನ್ನು ನಡೆಸಿದವರು ಅಂದಮಾತ್ರಕ್ಕೆ ಆ ಹುಡುಕಾಟಕ್ಕೂ ಮತ್ತು ವಸ್ತು–ಕ್ರಮಗಳಿಗೂ ಅವಿನಾಭಾವ ಸಂಬಂಧವಿದೆ ಎಂದಲ್ಲ. ನಾವು ಆ ಹುಡುಕಾಟವನ್ನು ಮರೆತು ಬರಿದೆ ಅವರ ಕ್ರಮಗಳ ಮಟ್ಟದಲ್ಲಿ ಗಾಂಧಿಯನ್ನು ಕಾಣಹೊರಟವರು. ಸಾಬರಮತಿಯ ಗುಡಿಸಲಿನಲ್ಲಿ, ಅಹಿಂಸೆಯಲ್ಲಿ, ಚರಖಾದಲ್ಲಿ ಹೀಗೆ ಎಲ್ಲಿ ನೋಡಿದರೂ ನಮಗೆ ಏನೂ ಸಿಗದಿದ್ದಕ್ಕೆ ಕಾರಣ ಇದು. ಅಲ್ಲಿ ಇರುವುದು ಯಾವುದೂ ಮುಖ್ಯವಲ್ಲ. ಆದರೆ ಅಂಥದ್ದೇನೋ ಒಂದು ಇಲ್ಲದೇ ಈ ಜಿಜ್ಞಾಸೆ ನಡೆಯುವುದೂ ಇಲ್ಲ. ■